ಶ್ರೀ

ಶ್ರೀ ಗುರುಭ್ಯೋ ನಮಃ

## ಶ್ರೀ ರಾಘವೇಂದ್ರ ಸ್ವಾಮಿಗಳವರ ಸ್ತೋತ್ರ

ವರ ಮಂತ್ರಾಲಯ ಕರುಣಪಯೋನಿಧಿ ಪರಿಪಾಲುಸೊ ಗುರು ರಾಘವೇಂದ್ರ ।
ನೆರೆ ಸಂತೈಸುವ ಶರಣ ಸಮೂಹವ ಪರಿತೋಷಿಪ ಸಿರಿ ರಾಘವೇಂದ್ರ ।
ತುಂಗಾತೀರದಿ ಕಂಗೊಳಿಸುವ ಸಿರಿರಂಗನ ಸೇವಿಪ ರಾಘವೇಂದ್ರ ।
ಸಿಂಗರವದನ ಶುಭಾಂಗ ಮನೋಹರ ಮಂಗಳದಾಯಕ ರಾಘವೇಂದ್ರ ।
ಮರೆಬಂದವರಿಗೆ ನೆರೆನಿಂದಿಹ ಗುರು ಸುರವಂದಿತ ತರು ರಾಘವೇಂದ್ರ ।
ವರ ಭೂಸುರ ಮಣಿ ಸುರ ಚಿಂತಾಮಣಿ ಶರಣರ ದಿನಮಣಿ ರಾಘವೇಂದ್ರ ।
ವರ ಸೌಖ್ಯದ ಕಣಿ ಹರಿಕರದರಗಿಣಿ ಪೊರೆವ ಸುಗುಣಮಣಿ ರಾಘವೇಂದ್ರ ।
ಸುಂದರ ಶಯನ ಚಂದಿರ ಮುಖ ಸಿರಿ ಅಂದವ ನೋಡಿದ ರಾಘವೇಂದ್ರ ।
ಆನಂದತೀರ್ಥಮತ ದುಂದುಭಿ ನಾಮವ ಪೊಂದಿಸಿ ಪಾಡಿದ ರಾಘವೇಂದ್ರ ।
ದುರುಮತ ಧೀರರ ಹರ ನೀನೆನಿಸಿದ ಗುರು ಸಾರ್ವಭೌಮ ರಾಘವೇಂದ್ರ ।
ರಘುವರ ರಾಮನ ಮಿಗಿಲಾದರ್ಚನೆ ಝಗಿ ಝಗಿಸುವ ಸಿರಿ ರಾಘವೇಂದ್ರ ।
ಸುರಗುಣರೊಂದಿಗೆ ಶರಣರ ಪಾಲಿಪ ಪರಿ ತೋರಿದ ಗುರು ರಾಘವೇಂದ್ರ ।
ವೇಣುವಿನೋದನ ಕಾಣುವ ಕನ್ನಡಿ ಜ್ಞಾನದ ಕೈಪಿಡಿ ರಾಘವೇಂದ್ರ ।
ವಾಣಿಯು ವದನದಿ ವೀಣೆಯು ನುಡಿಸಿದ ಮಾನದ ಮುನ್ನುಡಿ ರಾಘವೇಂದ್ರ ।
ಇಳೆ ದೇವತೆಗಳ ಒಳಗೊಂಡಿಹ ನೆಲೆ ಸೆಲೆ ಕ್ಷೇತ್ರದ ಶಿಲೆ ರಾಘವೇಂದ್ರ ।
ಕಲಿ ಕಲ್ಮಷವನು ಕಳಿಯುವ ನವಕಲೆ ಬಲು ಭಕುತಿಯ ಬೆಲೆ ರಾಘವೇಂದ್ರ ।
ಧನವಂತನಲೀ ನಿಜ ಸಂತತಿಯೊಳು ಘನ ಸಂತಸ ನಿಧಿ ರಾಘವೇಂದ್ರ ।
ಕ್ಷಯ ಕುಷ್ಠಾದಿಯ ಭಯನಾಶಕ ಪರ ನಯನಾದ್ಭುತ ಸಿರಿ ರಾಘವೇಂದ್ರ ।
ಪ್ರಿಯ ಸೇವಕರೊಳು ದಯದಾಕ್ಷಿಣ್ಯದ ನಿಯಮಾನ್ವಿತ ಸಿರಿ ರಾಘವೇಂದ್ರ ।
ಭೂತ ಪಿಶಾಚ ವಿಘಾತಕ ಗುಣಮಣಿ ನೂತನಜ್ಯೋತಿಯೆ ರಾಘವೇಂದ್ರ ।
ಎಂದಿಗು ಕಾಣದ ಚಂದವ ನೋಡಲು ಅಂಧರ ಕಣ್ಣರಿ ರಾಘವೇಂದ್ರ ।
ಇಂಗಿತವೀಯುವ ಡಂಗುರ ಸಾರಿದ ತುಂಗ ವಿಕ್ರಮ ಸಿರಿ ರಾಘವೇಂದ್ರ ।
ಹಿಂಗಿಸಿ ತಾಪವ ಮಂಗಳಗೊಳಿಸುವ ಸುಖ ಸಂಗ ಸುಜನಸಿರಿ ರಾಘವೇಂದ್ರ ।
ಭವ ಸಂತಾಪವ ಹರಿಸುವ ಚಂದಿರ ಭುವಿ ಸುಮ ಸುಂದರ ರಾಘವೇಂದ್ರ ।
ನವನೀತಚೋರನ ಕವನದಿ ಕುಣಿಸಿದ ಕವಿ ಕುಲಮಂದಿರ ರಾಘವೇಂದ್ರ ।
ಮಹಾ ಪಾತಕವನು ದಹಿಸಿದ ದಶಮುಖಿ ಬಹು ಸಂತಸ ಸುಖಿ ರಾಘವೇಂದ್ರ ।
ಹರಿಸಿ ವಿರಾಗವ ಗ್ರಹಿಸುತ ಯೋಗವ ಮಹಿಸುರ ಸುಖ ರಾಘವೇಂದ್ರ ।
ನೆರೆ ಸಂಸಾರದ ಬಿರುಬಂಧನಗಳ ತ್ವರೆ ಮೋಚಿಪ ಸಿರಿ ರಾಘವೇಂದ್ರ ।
ವರ ಕಾರುಣ್ಯದ ನೆರೆ ದಾಕ್ಷಿಣ್ಯದ ದೊರೆ ಧಾರ್ಮಿಕ ಸಿರಿ ರಾಘವೇಂದ್ರ ।
ನಿಂದು ಯತೀಂದ್ರರು ಚಂದದಿ ಸೇವಿಪ ಸುಂದರ ಮುಖಸಿರಿ ರಾಘವೇಂದ್ರ ।
ವರ ಮೌಕ್ತಿಕಮಣಿ ಹರಳು ಪದಕಧರ ನೆರೆ ಕಸ್ತೂರಿ ಸಿರಿ ರಾಘವೇಂದ್ರ ।
ತರುಣ ತುಲಸಿಯೊಳು ಮೆರೆವ ಕುಸುಮಧರ ಹರಿನಾಮದ ಸಿರಿ ರಾಘವೇಂದ್ರ ।
ಥಳಥಳಿಸುವ ದೀವಿಗೆ ಬೆಳೆದಿಂಗಳ ಕಳೆಕಾಂತಿಯ ಸಿರಿ ರಾಘವೇಂದ್ರ ।
ನಳ ನಳಿಸುವ ಯೆಳೆತಳಿರೆಲೆ ತೋರಣ ಸಲೆ ಶೋಭಿಪ ಸಿರಿ ರಾಘವೇಂದ್ರ ।
ಕಾಷಾಯದಾಯತಿವೇಷ ವಸನದೊಳು ನೂತನ ಜ್ಯೋತಿಯೆ ರಾಘವೇಂದ್ರ ।
ಕ್ಷಿತಿಯಾಕಾಶದ ಅತಿ ವೈಭವದೊಳು ರಥವೇರಿದ ಸಿರಿ ರಾಘವೇಂದ್ರ ।
ಪೂಸಿದ ಚಂದನ ವಾಸನೆಯೊಳು ಬಲು ಸೂಸುವ ಸಿರಿವರ ರಾಘವೇಂದ್ರ ।
ಪಥದೊಳು ಪೂಮಳೆ ಅತಿ ಹರುಷದ ಹೊಳೆ ಮಿತಿಮೀರಿದ ಸಿರಿ ರಾಘವೇಂದ್ರ ।
ಕವಿಗಾಯಕ ಭಟ ನವನಾಟ್ಯಕ ನಟ ತವ ಸೇವಿಪ ಸಿರಿ ರಾಘವೇಂದ್ರ ।
ಅವನಿಯ ಈ ವೈಭವ ಅವಲೋಕಿಪ ದಿವಿಜಾನನ ಸಿರಿ ರಾಘವೇಂದ್ರ ।
ಕಂಣ್ದಣಿ ನೋಡುವ ಮನದಣಿ ಪಾಡುವ ಗಣ್ಯರ ಸರಸಿರಿ ರಾಘವೇಂದ್ರ ।

ಪೆಣ್ ಪುರುಷರು ಸಲೆ ಕುಣಿಕುಣಿದಾಡುತ ಝಣ್ ಝಣ್ ಝಣ್ ಸಿರಿ ರಾಘವೇಂದ್ರ ।
ಪುರಮಂತ್ರಾಲಯ ವರ ವೈಭವದೊಳು ಮೆರೆವ ಮುನೀಂದ್ರನೆ ರಾಘವೇಂದ್ರ ।
ಗುರುಮಧ್ವೇಷನ ಸಿರಿ ಸಾಮ್ರಾಜ್ಯವ ಮೆರೆವ ವರೇಂದ್ರನೆ ರಾಘವೇಂದ್ರ ।
ದರುಶನ ಮಾತ್ರದಿ ದುರಿತಗಳಳಿಯುವ ವರಪುಣ್ಯದ ನಿಧಿ ರಾಘವೇಂದ್ರ ।
ಸ್ಮರಿಸುತ ಪಾಡಲು ತ್ವರಿತದಿ ಒದಗುವ ಸಿರಿಸಂಪದ ನಿಧಿ ರಾಘವೇಂದ್ರ ।
ವರಗುರು ಪಾದವ ನಿರುತದಿ ನೆನೆವರ ನೆರೆ ಸಂತಸ ಸಿರಿ ರಾಘವೇಂದ್ರ ।
ಪರಿಪರಿ ಸೇವೆಗೆ ವರಪದವೀಯುವ ಹರಿ ಸನ್ನಿಧಿಗೆ ಸಿರಿ ರಾಘವೇಂದ್ರ ।
ಸಿರಿಗುಣ ಸಾಂದ್ರನೆ ವರ ಮುನಿಚಂದ್ರನೆ ಪೊರೆವರ ಇಂದ್ರನೆ ರಾಘವೇಂದ್ರ ।
ಸಂಸಾರದ ಮಹ ಹಿಂಸೆಯ ಹಿಂಗಿಸೊ ಹಂಸ ಕುಲೋತ್ತಮ ರಾಘವೇಂದ್ರ ।
ಸಂಶಯ ಹರ ಪದಪಾಂಸು ಭಕುತಿಕೊಡು ಸಾಂಶ ಕುಲೋತ್ತಮ ರಾಘವೇಂದ್ರ ।
ಮಲ್ಲಿಗೆಗಳು ಶ್ರೀ ಪಲ್ಲವ ಪಾದಕೆ ಸಲ್ಲಿಸುವೆ ಪ್ರಭು ರಾಘವೇಂದ್ರ ।
ಸಲ್ಲಿಸಿ ನಮಿಸುವೆ ಹರಿ ವಿಠಲೇಶನ ನಲ್ಮೆ ಇರಲಿ ಗುರು ರಾಘವೇಂದ್ರ ॥

ಶ್ರೀ ರಾಘವೇಂದ್ರಸ್ವಾಮಿಗಳವರ ಸ್ತೋತ್ರ ಸಮಪ್ತಿ
॥ ಶ್ರೀ ಕೃಷ್ಣಾರ್ಪಣಮಸ್ತು ॥

www.vijayadasaru.net